

## ಶ್ರೀ ಎಚ್.ಟಿ.ಕೃಷ್ಣೇಗೌಡ

ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿ ಹೊನ್ನೇನಹಳ್ಳಿಯ ರೈತಾಪಿ ಕುಟುಂಬದಲ್ಲಿ ಜನನ. ತಂದೆ ಸ್ವಾತಂತ್ರ್ಯ ಹೋರಾಟಗಾರ ಎಚ್.ಆರ್.ತಿಮ್ಮೇಗೌಡ. 70ರ ವಯೋಮಾನ. ಇಂಜಿನಿಯರಿಂಗ್ ಡಿಪ್ಲೋಮಾ ಪದವೀಧರ. ಸರ್ಕಾರಿ ಸೇವೆಗೆ ಸೇರದೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡದ್ದು ವಿಶೇಷ. ಬೆಳ್ಳೂರು ವ್ಯವಸಾಯ ಸೇವಾ ಸಹಕಾರ ಸಂಘದ ಮೂಲಕ ಸಹಕಾರಿ ಕ್ಷೇತ್ರಕ್ಕೆ ಪ್ರವೇಶ. ನಂತರ ನಾಗಮಂಗಲದ ತಾಲ್ಲೂಕು ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾಗಿ, ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕರಾಗಿ, ರಾಜ್ಯ ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕರಾಗಿ ಹೀಗೆ  ಜಿಲ್ಲೆ ಮತ್ತು ರಾಜ್ಯ ಸಹಕಾರಿ ಸಂಸ್ಥೆಗಳ ಜೊತೆ ನಿಕಟ ಸಂಪರ್ಕ. ಇದರಿಂದಾಗಿ ಜಿಲ್ಲೆಯ ಉತ್ತಮ ಸಹಕಾರಿಯೆಂಬ ಹೆಗ್ಗಳಿಕೆ.

ಇದರ ಜೊತೆಗೆ ಸಾಮಾಜಿಕ ಕ್ಷೇತ್ರಗಳಲ್ಲಿಯೂ ತೊಡಗಿಸಿಕೊಂಡ ಪರಿಣಾಮ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾಗಿ, ಉಪಾಧ್ಯಕ್ಷರಾಗಿ,  ಹಂಗಾಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಕೆ. ರಾಜಕೀಯ ಕ್ಷೇತ್ರದಲ್ಲಿಯೂ ತೊಡಗಿ ತಾಲ್ಲೂಕು ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ವಿವಿಧ ಹುದ್ದೆಗಳಲ್ಲಿ ಸೇವೆ. ಶಿಕ್ಷಣ ಕ್ಷೇತ್ರದಲ್ಲಿಯೂ ದುಡಿದಿರುವ ಶ್ರೀಯುತರು ನಾಗಮಂಗಲದ ಮಾದರಿ ವಿದ್ಯಾಸಂಸ್ಥೆಯ ಅಧ್ಯಕ್ಷ. ಜೊತೆಗೆ ಪ್ರಸಿದ್ಧ ನಾಗಮಂಗಲ ಆದಿಚುಂಚನಗಿರಿ ಮಹಾಸಂಸ್ಥಾನ  ಮಠದ  ಪದವಿ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯ ರಾಜ್ಯ ಸಹಕಾರ ಇಲಾಖೆ ನೀಡುವ ರಾಜ್ಯಮಟ್ಟದ ಪ್ರಶಸ್ತಿ 'ಸಹಕಾರರತ್ನ'ಕ್ಕೆ 2023ರಲ್ಲಿ ಭಾಜನ.

ಪ್ರಸ್ತುತ ಕರ್ನಾಟಕ ಸಂಘ ಪ್ರಥಮ ಬಾರಿಗೆ ಕೊಡಮಾಡುವ 'ಎಸ್.ಎಂ.ಲಿಂಗಪ್ಪ ಪ್ರಶಸ್ತಿ'ಯನ್ನು 25,000 ರೂ ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತಿದೆ.

ಅವಿನಾಶ್ ಗ್ರಾಫಿಕ್ಸ್, ಮಂಡ್ಯ. ಮೊ: 9845868957



# ಪ್ರಥಮ ವರ್ಷದ
# ಎಸ್.ಎಂ.ಲಿಂಗಪ್ಪ ಪ್ರಶಸ್ತಿ
# ಪ್ರದಾನ ಸಮಾರಂಭ

**18.12.2023ರ ಸೋಮವಾರ ಸಂಜೆ 5.30 ಗಂಟೆಗೆ**
**ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನ**
**ಕರ್ನಾಟಕ ಸಂಘದ ಆವರಣ, ಮಂಡ್ಯ**

ಬಾರಿಸು ಕನ್ನಡ ಡಿಂಡಿಮವ

## ಕರ್ನಾಟಕ ಸಂಘ (ರಿ)

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಆರ್.ಪಿ.ರಸ್ತೆ, ಮಂಡ್ಯ – 571 401
ದೂ : 08232 227755
email : karnatakasanghamandya@gmail.com
website: www.ksmandya.com



## ಶ್ರೀ ಎಸ್.ಎಂ.ಲಿಂಗಪ್ಪ

ಕೆ.ಆರ್.ಪೇಟೆಯ ಶೀಳನೆರೆಯಲ್ಲಿ 1918ರಲ್ಲಿ ಜನನ. ರೈತಾಪಿ ಕುಟುಂಬ. ತಂದೆ ಆ ಕಾಲಕ್ಕೆ ಸಾಹುಕಾರರೆನಿಸಿಕೊಂಡಿದ್ದ ಮರೀಗೌಡರು. ಶ್ರೀಮಂತ ಕುಟುಂಬವಾದರೂ, ಶಿಸ್ತಿಗೊಳಪಟ್ಟ ಕೂಡು ಕುಟುಂಬ. ಬಿ.ಎ. ಎಲ್.ಎಲ್.ಬಿ ಪದವೀಧರರಾದ ಲಿಂಗಪ್ಪ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಆಕರ್ಷಿತರಾಗಿ, ಸ್ವಾತಂತ್ರ್ಯಾ ನಂತರ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ. 1952ರಲ್ಲಿ ಪ್ರಥಮ ಬಾರಿಗೆ ಶಾಸಕರಾದ ಶ್ರೀಯುತರು, ಅನಂತರ 2 ಬಾರಿ ಶಾಸಕರಾಗಿದ್ದರು. ಪ್ರಥಮವಾಗಿ ಪ್ರಾರಂಭವಾದ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಗ್ರಾಮಾಭಿವೃದ್ಧಿಯ ಕಡೆಗೆ ಗಮನ.

ಬ್ರಹ್ಮಚಾರಿಯಾಗಿಯೇ ಕೊನೆಯವರೆಗೆ ಉಳಿದ ಶ್ರೀಯುತರು ಗ್ರಾಮೀಣ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ 'ಗ್ರಾಮಭಾರತಿ ಶಿಕ್ಷಣ ಸಂಸ್ಥೆ'ಯ ಮೂಲಕ ಪ್ರೌಢಶಾಲೆಯನ್ನು ಪ್ರಾರಂಭಿಸಿ, ಆ ಕಾಲಕ್ಕೆ ಒಕ್ಕಲಿಗರ ಹಾಸ್ಟೆಲ್ ಮೂಲಕ ಗ್ರಾಮೀಣ ಮಕ್ಕಳಿಗೆ ವಸತಿಯನ್ನು ಏರ್ಪಾಡು ಮಾಡಿದ್ದು ದೊಡ್ಡ ಸಾಹಸ. ತಾಲ್ಲೂಕು ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವನ್ನು ಪ್ರಾರಂಭಿಸಿ ಬಹಳ ಕಾಲ ಅಧ್ಯಕ್ಷರಾಗಿ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕರಾಗಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿ ಸೇವೆ. ಶಿಕ್ಷಣ, ಸಹಕಾರ ಹಾಗೂ ಸಾಮಾಜಿಕ ಸೇವೆಗಳಲ್ಲಿ ಜೀವನದ ಕೊನೆಯವರೆಗೆ ತೊಡಗಿಸಿಕೊಂಡಿದ್ದ ಶ್ರೀಯುತರದ್ದು ಸಾರ್ಥಕ ಬದುಕು, ಕೊನೆಯವರೆಗೂ ವಿದ್ಯಾರ್ಥಿಗಳೊಡನೆ ಹಾಸ್ಟಲ್ ವಾಸ.

ತುಂಬಾ ಪ್ರಾಮಾಣಿಕವಾಗಿ, ಶಿಸ್ತಿನ ಸಿಪಾಯಿಯಂತೆ ಕೊನೆಯವರೆಗೂ ಬದುಕಿದ ಶ್ರೀಯುತರು ಯಾರ ಮುಲಾಜಿಗಾಗಲೀ, ರಾಜಿಗಾಗಲೀ, ಸ್ವಾರ್ಥಕ್ಕಾಗಲೀ, ಒಳಗಾದವರಲ್ಲ. ಇಂತಹ ಶ್ರೀಯುತರ ಹೆಸರನ್ನು ಶಾಶ್ವತಗೊಳಿಸುವ ಮತ್ತೊಂದು ನಿಟ್ಟಿನಲ್ಲಿ ಮಂಡ್ಯದ ಕರ್ನಾಟಕ ಸಂಘದಲ್ಲಿ ದತ್ತಿಯೊಂದನ್ನು ಸ್ಥಾಪಿಸಿ ಪ್ರತಿವರ್ಷ ಸಹಕಾರ/ ಗ್ರಾಮೀಣಾಭಿವೃದ್ಧಿಯಲ್ಲಿ ಸಾಧನೆ ಮಾಡಿದ ಒಬ್ಬರಿಗೆ 25,000 ರೂ ನಗದು ಹಾಗೂ ಪ್ರಶಸ್ತಿ ಫಲಕದೊಡನೆ ಗೌರವಿಸಲು ಕೆ.ಆರ್.ಪೇಟೆ 'ಗ್ರಾಮ ಭಾರತಿ ಶಿಕ್ಷಣ ಸಂಸ್ಥೆ'ಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್‌ಕುಮಾರ್ ಅವರು ವ್ಯವಸ್ಥೆ ಮಾಡಿದ್ದಾರೆ.

ಡಾ.ಹೆಚ್.ಎಸ್.ಮುದ್ದೇಗೌಡ    ತಗ್ಗಹಳ್ಳಿ ವೆಂಕಟೇಶ್    ಎಂ.ಕೆ.ಹರೀಶ್‌ಕುಮಾರ್
ಲೋಕೇಶ್ ಚಂದಗಾಲು    ಮಂಜುಳಾ ಉದಯಶಂಕರ್    ಎಚ್.ಡಿ.ಸೋಮಶೇಖರ್
ಮತ್ತು ಸದಸ್ಯರು    ಎ.ಇಮ್ಮಾನ್ಯೂಯಲ್

ಪ್ರಥಮ ವರ್ಷದ

# ಎಸ್.ಎಂ.ಲಿಂಗಪ್ಪ ಪ್ರಶಸ್ತಿ

## ಪ್ರದಾನ ಸಮಾರಂಭ

18.12.2023ರ ಸೋಮವಾರ ಸಂಜೆ 5.30 ಗಂಟೆಗೆ
ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನ
ಕರ್ನಾಟಕ ಸಂಘದ ಆವರಣ, ಮಂಡ್ಯ

**ಅಧ್ಯಕ್ಷತೆ:**
ಶ್ರೀ ಎಂ.ಎಸ್.ಆತ್ಮಾನಂದ
ಮಾಜಿ ಸಚಿವರು, ಮಂಡ್ಯ

**ಪ್ರಶಸ್ತಿ ಪ್ರದಾನ:**
ಪ್ರೊ.ಬಿ.ಕೆ. ಚಂದ್ರಶೇಖರ್
ಮಾಜಿ ಸಚಿವರು, ಬೆಂಗಳೂರು

**ಎಸ್.ಎಂ.ಲಿಂಗಪ್ಪ ಅವರನ್ನು ಕುರಿತು:**
ಶ್ರೀ ಕೆ.ಎನ್. ಚಂದ್ರಮೋಹನ್
ಪ್ರಿನ್ಸಿಪಾಲರು (ನಿ), ಕಿಕ್ಕೇರಿ, ಕೆ.ಆರ್.ಪೇಟೆ

**ಪ್ರಶಸ್ತಿ ಪುರಸ್ಕೃತರು :**
ಶ್ರೀ ಎಚ್.ಟಿ. ಕೃಷ್ಣೇಗೌಡ
ಪ್ರಮುಖ ಸಹಕಾರಿಗಳು, ನಾಗಮಂಗಲ

**ಅಭಿನಂದನಾ ನುಡಿ:**
ಡಾ.ಬಿ.ಕೆ.ಲೋಕೇಶ್
ಪ್ರಿನ್ಸಿಪಾಲರು (ನಿ), ನಾಗಮಂಗಲ

**ಉಪಸ್ಥಿತಿ :**
ಶ್ರೀಮತಿ ಎಸ್.ಡಿ.ಕಾಂತಾಮಣಿ
ಶ್ರೀ ಎಸ್.ಅಂಬರೀಶ್
ಮಾಜಿ ಉಪಾಧ್ಯಕ್ಷರು, ಜಿಲ್ಲಾ ಪಂಚಾಯ್ತಿ
(ಎಸ್.ಎಂ.ಲಿಂಗಪ್ಪ ಅವರ ಕುಟುಂಬ ವರ್ಗ)

**ತಮಗೆ ಸ್ವಾಗತ**

ಪ್ರೊ.ಬಿ. ಜಯಪ್ರಕಾಶಗೌಡ
ಅಧ್ಯಕ್ಷ